**ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ  1301/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | | ವಿನುತ | ಪ್ರಾ.ಸಾಃ 3 |
| ತಂದೆಯ/ಗಂಡನ ಹೆಸರು | | ಶ್ರೀನಿವಾಸ | ಚಾಸಾಃ 2 |
| ವಯಸ್ಸು | | 43 | |
| ಕೆಲಸ | | ಗೃಹಿಣಿ | ಸಾ ಪ್ರ ಬೋ |
| ವಾಸ | | ನಂಜನಗೂಡು | ದಿಃ  07.02.2023 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಚಾಸಾ 1 ನನ್ನ ಮೈದುನ, ಚಾಸಾ 3 ನನ್ನ ಪತಿ, ಚಾಸಾ 4 ನನ್ನ ಅತ್ತೆ, ಮೃತ ರುಚಿತ ನನ್ನ ನಾದಿನಿಯ ಮಗಳು. ದಿನಾಂಕ 25.02.2014 ರಂದು ಬೆಳಗ್ಗೆ 07.15 ರ ಸಮಯದಲ್ಲಿ ಮೃತ ರುಚಿತರೊಂದಿಗೆ ಕೆಎ 09 ಇಜೆಡ್ 1447 ರ ನನಗೆ ಸೇರಿದ ಹಿರೋ ಪ್ಲೆಸ್ ದ್ವಿಚಕ್ರ ವಾಹನದಲ್ಲಿ ನಮ್ಮ ಜಮೀನಿಗೆ ಚಾಸಾ 3 ಮತ್ತು 4 ರವರಿಗೆ ತಿಂಡಿ ತೆಗೆದುಕೊಂಡು ಹೋಗುತ್ತಿದ್ದೆನು. ನಮ್ಮ ಜಮೀನು ಹುಲ್ಲಹಳ್ಳಿ ರಸ್ತೆಯ ಬ್ಯಾಳಾರು ಗ್ರಾಮದಲ್ಲಿದೆ. ನಾನು ನಮ್ಮ ಜಮೀನಿನ ಬಳಿ ಹೋಗಿ ರಸ್ತೆಯ ಎಡಭಾಗದಲ್ಲಿ ನಮ್ಮ ವಾಹನವನ್ನು ನಿಲ್ಲಿಸಿದೆವು. ಚಾಸಾ 4 ರವರು ರಸ್ತೆಯ ಪಕ್ಕದಲ್ಲಿನ ಕೆರೆಯ ಏರಿಯ ಮೇಲೆ ನಿಂತಿದ್ದನ್ನು ನೋಡಿ ನನ್ನ ವಾಹನವನ್ನು ನಿಲ್ಲಿಸಿದೆ. ಆಗ ಸಮಯ 07.45 ಆಗಿತ್ತು. ಹಿಂದಿನಿಂದ ಕೆಎ 02 ಸಿ 99 ರ ಚಾಮುಂಡಿ ಬಸ್ಸಿನ ಚಾಲಕ ಸದರಿ ಬಸ್ಸನ್ನು ಅತಿ ವೇಗ ಮತ್ತು ಅಜಾಗರೂಕರತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬೈಕಿಗೆ ಹಿಂದಿನಿಂದ ಡಿಕ್ಕಿಪಡಿಸಿರುತ್ತಾರೆ. ಮೃತ ರುಚಿತರವರು ಕೆಳಗೆ ಬಿದ್ದರು. ರುಚಿತರವರಿಗೆ ತಲೆಗೆ ಮತ್ತು ಇತರೆ ಕಡೆಗಳಲ್ಲಿ ತೀವ್ರ ಪೆಟ್ಟಾಗಿತ್ತು. ಚಾಸಾ 4 ರವರಿಗೆ ಬಲಗೈಗೆ ಪೆಟ್ಟಾಗಿತ್ತು. ನನಗೆ ಯಾವುದೇ ಗಾಯ ಆಗಲಿಲ್ಲ. ಆಗ ಜಮೀನಿನಲ್ಲಿದ್ದ ಚಾಸಾ 1 ಮತ್ತು 3 ರವರು ಬಂದರು. ತಕ್ಷಣ ರುಚಿತಾಳನ್ನು ಹಾಗೂ ಚಾಸಾ 4 ರವರನ್ನು  ಅಂಬ್ಯುಲೆನ್ಸ್ ನಲ್ಲಿ ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಅಪೊಲೊ  ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಚಿಕಿತ್ಸೆ ಫಲಕಾರಿಯಾಗದೆ

ದಿನಾಂಕ 28.03.2014 ರಂದು ಮೈಸೂರಿನ ಜೆ ಎಸ್ ಎಸ್ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ಈ ಬಗ್ಗೆ ಚಾಸಾ 1 ರವರು ದೂರನ್ನು ನೀಡಿರುತ್ತಾರೆ. ಅಪಘಾತವು ಬಸ್ಸಿನ ಚಾಲಕನ ಅತಿ ವೇಗ ಮತ್ತು ಅಜಾಗರೂಕರತೆಯಿಂದ  ಉಂಟಾಗಿರುತ್ತದೆ. ನಂತರ ಬಸ್ಸಿನ ಚಾಲಕನ ಹೆಸರು ಮಂಟ ಎಂದು ತಿಳಿದು ಬಂದಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ  ಅಪಘಾತಪಡಿಸಿದ ಬಸ್ಸನ್ನು ನಿಪಿ 3 ರಿಂದ 5 ರ ಛಾಯಾ ಚಿತ್ರಗಳಲ್ಲಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಸ್ ಎಸ್ ಬಿ ವಕೀಲರಿಂದಃ**

2. ನಾನು ದ್ವಿಚಕ್ರ ವಾಹನವಾದ ಸ್ಕೂಟರನ್ನು ಓಡಿಸುತ್ತೇನೆ. ಸ್ಕೂಟರನ್ನು ಚಾಲನೆ ಮಾಡಲು ನನ್ನ ಬಳಿ ಚಾಲನಾ ಪರವಾನಗಿ ಇದೆ. ಅಪಘಾತ ಏರ್ಪಟ್ಟ ಕಾಲಕ್ಕೆ ನನ್ನ ಬಳಿ ದ್ವಿಚಕ್ರ ವಾಹನವಾದ ಸ್ಕೂಟರಿನ ಕುರಿತು ಚಾಲನಾ ಪರವಾಗಿನಗಿ ಇತ್ತು. (ಸಾಕ್ಷಿ ಆಕೆಗೆ ಸೇರಿದ ಚಾಲನಾ ಪರವಾನಗಿಯನ್ನು ಆರೋಪಿತರ ಪರ ವಕೀಲರಿಗೆ ತೋರಿಸಿದ್ದು, ಸದರಿ ಚಾಲನಾ ಪರವಾನಗಿಯನ್ನು ಆರೋಪಿತರ ಪರ ವಕೀಲರು  ಪರಿಶೀಲಿಸಿ ಹಿಂತಿರುಗಿಸಿರುತ್ತಾರೆ. ಸದರಿ ಚಾಲನಾ ಪರವಾನಗಿಯಂತೆ ದಿನಾಂಕ 07.07.2011 ರಂದು ಸಾಕ್ಷಿ ಚಾಲನಾ ಪರವಾನಗಿಯನ್ನು ಪಡೆದಿರುವುದು ಕಂಡು ಬರುತ್ತದೆ. ) ನಾನು ಚಾಸಾ 3 ಮತ್ತು 4 ರವರಿಗೆ ತಿಂಡಿಯನ್ನು ತೆಗೆದುಕೊಂಡು ಹೋಗಿದ್ದೆನು. ನಾನು ಅಲ್ಲಿಗೆ ಹೋದಾಗ  ಚಾಸಾ 1, 3 ಮತ್ತು 4 ರವರು ಜಮೀನಿನಲ್ಲಿದ್ದರು.

3. ನನ್ನ ಸ್ಕೂಟರಿನ ಹಿಂಭಾಗದಲ್ಲಿ ನಮ್ಮ ಸಂಬಂಧಿಕರು ಯಾರು ಕೂಡ ಬಂದಿರಲಿಲ್ಲ. ನಾನು ಮತ್ತು ಮೃತ ರುಚಿತಾ ಜಮೀನಿಗೆ ಹೋಗುತ್ತಿದ್ದೆವು. ನನ್ನ ಸ್ಕೂಟರಿಗೆ ಮಿರರ್ ಇವೆ. ನಾನು ಸದರಿ ಮಿರರ್ ನಲ್ಲಿ ಹಿಂಬದಿಯಿಂದ ಬರುತ್ತಿದ್ದ ವಾಹನಗಳನ್ನು ಒಂದು ಕ್ಷಣ ನೋಡಿರಬಹುದು. ನಮ್ಮ ಸ್ಕೂಟರಿನ ಹಿಂದಿನಿಂದ ಬಸ್ಸು ಅತಿ ವೇಗವಾಗಿ ಬರುತ್ತಿದ್ದ ಕಾರಣ ನಮ್ಮ ಮತ್ತು ಬಸ್ಸಿನ ನಡುವೆ ಎಷ್ಟು ಅಂತರ ಇತ್ತು ಎಂದು ಹೇಳಲಾಗುವುದಿಲ್ಲ. ನಾನು ಎಂದಿನಂತೆ ಜಮೀನಿಗೆ ತಿಂಡಿಯನ್ನು ತೆಗೆದುಕೊಂಡು ಹೋಗಿದ್ದು, ಚಾಸಾ 4

ನಮ್ಮನ್ನು ನೋಡಿ ತಿಂಡಿಯನ್ನು ತೆಗೆದುಕೊಳ್ಳಲು ಬಂದರು. ಚಾಸಾ 4 ರವರು ರಸ್ತೆಯ ಪಕ್ಕದಲ್ಲಿನ ಕೆರೆಯ ಏರಿಯ ಮೇಲೆ ನಿಂತಿದ್ದರು. ನಮ್ಮ ಜಮೀನು ನಂಜನಗೂಡಿನಿಂದ ಹುಲ್ಲಹಳ್ಳಿಗೆ ಹೋಗುವ ಎಡಭಾಗದಲ್ಲಿದ್ದು, ನನ್ನ ಅತ್ತೆ ರಸ್ತೆಯ ಎಡಭಾಗದಲ್ಲಿ ನಿಂತಿದ್ದರು.

4. ನಮ್ಮ ಜಮೀನಿನ ಪಕ್ಕದಲ್ಲಿ ಕೆರೆ ಇದ್ದು, ಯಾವುದೇ ತಡೆ ಗೋಡೆ ಇಲ್ಲ. ನಂಜನಗೂಡು ಹುಲ್ಲಹಳ್ಳಿ ರಸ್ತೆಯ ಎರಡೂ ಬದಿಯಲ್ಲಿ ನಮ್ಮ ಜಮೀನು ಇದೆ ಎಂದರೆ ಸರಿ. ಚಾಸಾ 4 ರವರು ನಂಜನಗೂಡು ಹುಲ್ಲಹಳ್ಳಿ ರಸ್ತೆಯ ಬಲಭಾಗದಲ್ಲಿ ನಿಂತಿದ್ದರು ಎಂದರೆ ಸಾಕ್ಷಿ ಎಡಭಾಗದಲ್ಲಿ ನಿಂತಿದ್ದರು ಎಂದು ಹೇಳುತ್ತಾರೆ. ನಾನು ಚಾಸಾ 4 ರವರನ್ನು ದೂರದಿಂದ ನೋಡಿರುತ್ತೇನೆ. ಚಾಸಾ 4 ರವರು ನಂಜನಗೂಡು ಹುಲ್ಲಹಳ್ಳಿ ರಸ್ತೆಯ ಬಲಭಾಗದಲ್ಲಿರುವ ನಮ್ಮ ಜಮೀನಿನಿಂದ ನಮ್ಮನ್ನು ಕರೆದಿದ್ದು, ಆಗ ನಾನು ಸ್ಕೂಟರನ್ನು ಏಕಾಏಕಿ ಬಲಭಾಗಕ್ಕೆ ತಿರುಗಿಸಿರುತ್ತೇನೆ ಎಂದರೆ ಸಾಕ್ಷಿ ಚಾಸಾ 4 ರವರು ರಸ್ತೆಯ ಎಡಭಾಗದಲ್ಲಿರುವ ನಮ್ಮ ಜಮೀನಿನಲ್ಲಿ ನಿಂತಿದ್ದು, ಅಲ್ಲಿಂದಲೇ ನಮ್ಮನ್ನು ಕರೆದಿರುತ್ತಾರೆ ಎಂದು, ಹಾಗಾಗಿ ನಾನು ಸ್ಕೂಟರನ್ನು ಬಲಭಾಗಕ್ಕೆ ಏಕಾಏಕಿ ತಿರುಗಿಸಿಲ್ಲ ಎಂದು ಹೇಳುತ್ತಾರೆ. ನಂಜನಗೂಡಿನಿಂದ ನಮ್ಮ ಜಮೀನಿಗೆ ಹೋಗುವ ಹುಲ್ಲಹಳ್ಳಿ ರಸ್ತೆಯಲ್ಲಿ ತಿರುವು ಇದೆ ಎಂದರೆ ಸರಿ. ಯಾವುದೇ ವಾಹನ ತಿರುವಿನ ರಸ್ತೆಯಲ್ಲಿ ಅತಿ ವೇಗವಾಗಿ ಚಾಲನೆ ಮಾಡಲು ಆಗುವುದಿಲ್ಲ ಎಂದರೆ ಸರಿ.

5. ಸಾಮಾನ್ಯವಾಗಿ ಕೆರೆಯ ಏರಿಯ ಮೇಲೆ ವೇಗವಾಗಿ ಹೋಗಲಾಗುವುದಿಲ್ಲ ಎಂದರೆ ಸಾಕ್ಷಿ ಕೆರೆಯ ಏರಿ ದೂರದಲ್ಲಿದ್ದ ಕಾರಣ ಬಸ್ಸಿನ ಚಾಲಕ ಬಸ್ಸನ್ನು ವೇಗವಾಗಿಯೇ ಚಾಲನೆ ಮಾಡಿಕೊಂಡು ಬಂದಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನಾವು ಸ್ಕೂಟರನ್ನು ನಿಲ್ಲಿಸಿದ ಜಾಗದಿಂದ ಮುಂದೆ ತಿರುವು ಇದೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ನಂಜನಗೂಡು ಹುಲ್ಲಹಳ್ಳಿ ರಸ್ತೆಯಲ್ಲಿ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಹಾಗಾಗಿ ಬಸ್ಸಿನ ಚಾಲಕ ಬಸ್ಸನ್ನು ನಿಗದಿತ ವೇಗ ಮಿತಿಯಲ್ಲಿ ಚಾಲನೆ ಮಾಡುತ್ತಿದ್ದರು ಎಂದರೆ ಸಾಕ್ಷಿ ಅಪಘಾತದ ಸಮಯದಲ್ಲಿ ಯಾವುದೇ ವಾಹನಗಳು ಇಲ್ಲದ ಕಾರಣ

ವೇಗವಾಗಿ ಚಾಲನೆ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ. ಅಪಘಾತ ನಡೆದ ಸ್ಥಳದ ರಸ್ತೆ ದೊಡ್ಡದಾಗಿದೆ, ಆದರೆ ಎಷ್ಟು ಅಡಿ ಅಗಲ ಇದೆ ಎಂದು ಗೊತ್ತಿಲ್ಲ. ಒಂದೇ ಸಮಯದಲ್ಲಿ ಎರಡು ಬಸ್ಸುಗಳು ಏಕ ಕಾಲಕ್ಕೆ ಹಾದುಹೋಗುವಷ್ಟು ರಸ್ತೆ ಅಗಲವಾಗಿದೆ ಎಂದರೆ ಸರಿ. ನಾನು ಟಾರ್ ರಸ್ತೆಯ ಮೇಲೆ ಇದ್ದೆನು. ಟಾರು ರಸ್ತೆಯ ಎರಡೂ ಬದಿಯಲ್ಲಿ ಕೆರೆಯ ಏರಿ ಬರುತ್ತದೆ. ಬಸ್ಸಿನ ಚಾಲಕನಾದ ಆರೋಪಿ ಹಿಂಬದಿಯಿಂದ ಎಷ್ಟು ವೇಗವಾಗಿ ಬರುತ್ತಿದ್ದನು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ಅಪಘಾತಕ್ಕೆ ಆರೋಪಿತರ ಅತಿ ವೇಗ ಮತ್ತು ಅಜಾಗರೂಕರತೆ ಕಾರಣ ಅಲ್ಲ ಎಂದರೆ ಸರಿಯಲ್ಲ. ಚಾಸಾ 4 ರವರು ರಸ್ತೆಯ ಬಲಭಾಗದಿಂದ ನಮ್ಮನ್ನು ಕರೆದಾಗ ನಾನು ಹಿಂಬದಿಯಿಂದ ಬರುತ್ತಿದ್ದಂತಹ ಬಸ್ಸನ್ನು ನೋಡದೆ ನನ್ನ ಸ್ಕೂಟರನ್ನು ಬಲಭಾಗಕ್ಕೆ ತೆಗೆದುಕೊಂಡಿದ್ದು, ಹಾಗಾಗಿ ಸದರಿ ಅಪಘಾತಕ್ಕೆ ನನ್ನ ನಿರ್ಲಕ್ಷತೆಯೇ ಕಾರಣ ಎಂದರೆ ಸರಿಯಲ್ಲ. ಅಪಘಾತದ ಕುರಿತಾಗಿ ಮೃತ ರುಚಿತಾರವರ ಕುಟುಂಬದವರು ಪರಿಹಾರವನ್ನು ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಮೃತ ರುಚಿತಾರವರ ಕುಟುಂಬದವರಿಗೆ ಪರಿಹಾರ ದೊರಕಿಸಿ ಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಆರೋಪಿತನ ಅತಿ ವೇಗ ಮತ್ತು ಅಜಾಗರೂಕರತೆ ಕಾರಣ ಅಲ್ಲ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**